ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./ಧಿಸ್ಥಿ೦ಡಿ/37/21-22
Ref. No. KSFC/H.O./

ದಿನಾಂಕ
Date : 12/04/2022

## ಸುತ್ತೋಲೆ

ವಿಷಯ:ಕರ್ನಾಟಕ ರಾಜ್ಯ ಬೆಳಗಾವಿ ವಿಭಾಗದ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆ ಹಾಗೂ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳಿಗೆ ಬೇಸಿಗೆ ಕಾಲದಲ್ಲಿ ಕಛೇರಿ ಕೆಲಸದ ವೇಳೆಯನ್ನು ಬದಲಾಯಿಸಿ ನಿಗಧಿಪಡಿಸಿರುವ ಬಗ್ಗೆ.

---

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ.ಸಿಆಸುಇ 33 ಇಆಸು 2021, ಬೆಂಗಳೂರು ದಿನಾಂಕ 11-04-2021ರ ಪ್ರಕಾರ ಕರ್ನಾಟಕ ರಾಜ್ಯ ಬೆಳಗಾವಿ ವಿಭಾಗದ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆ ಹಾಗೂ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳಿಗೆ ಬೇಸಿಗೆ ಕಾಲದಲ್ಲಿ ಕಛೇರಿ ಕೆಲಸದ ವೇಳೆಯನ್ನು ದಿನಾಂಕ 12.04.2021 ರಿಂದ 31.05.2021 ರವರಗೆ ಜಾರಿಗೆ ಬರುವಂತೆ ಪ್ರಸ್ತುತ ಜಾರಿಯಲ್ಲಿರುವ ಸಮಯದ ಬದಲಾಗಿ ಬೆಳಗ್ಗೆ 8.00 ಗಂಟೆಯಿಂದ ಮಧ್ಯಾಹ್ನ 01.30 ಗಂಟೆಯವರಗೆ ಕಛೇರಿ ಸಮಯವನ್ನು ನಿಗಧಿಪಡಿಸಿ ಸರ್ಕಾರ ಆದೇಶ ಹೊರಡಿಸಿರುತ್ತದೆ.

ಆದುದರಿಂದ ಸಂಸ್ಥೆಯಲ್ಲಿಯೂ ಸಹ ಈ ಕೆಳಕಂಡ ಶಾಖಾ ಕಛೇರಿಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ಸಮಯದ ಬದಲಾಗಿ ಕೆಲಸದ ವೇಳೆಯನ್ನು ದಿನಾಂಕ 12-04-2021 ರಿಂದ 31.05.2021 ರವರಗೆ ಜಾರಿಗೆ ಬರುವಂತೆ ಬೆಳಗ್ಗೆ 8.00 ಗಂಟೆಯಿಂದ ಮಧ್ಯಾಹ್ನ 01.30 ಗಂಟೆಯವರಗೆ ಕಾರ್ಯನಿರ್ವಹಿಸಲು ಕಛೇರಿ ಸಮಯವನ್ನು ನಿಗಧಿಪಡಿಸಲಾಗಿದೆ.

| | |
|---|---|
| 1.ಕಲಬುರಗಿ, | 5.ಕೊಪ್ಪಳ, |
| 2.ಬೀದರ್, | 6.ಯಾದಗಿರಿ, |
| 3.ರಾಯಚೂರು, | 7.ವಿಜಯಪುರ |
| 4.ಬಳ್ಳಾರಿ, | 8.ಬಾಗಲಕೋಟೆ |

ಈ ಶಾಖೆಗಳ ಉದ್ಯೋಗಿಗಳು ಬದಲಾದ ಸಮಯದಲ್ಲಿ ತಮ್ಮ ಕರ್ತವ್ಯವನ್ನು ಎಂದಿನಂತೆ ಯಾವುದೇ ಲೋಪ/ಅಡೆತಡೆ ಇಲ್ಲದೆ ಕರ್ತವ್ಯ ನಿರ್ವಹಿಸತಕ್ಕದ್ದು. ಶಾಖೆಯಲ್ಲಿನ ಗ್ರಾಹಕರಿಗೆ ಯಾವುದೇ ರೀತಿಯ ಅನಾನುಕೂಲ ಆಗದಂತೆ ತಮ್ಮ ಕರ್ತವ್ಯ ನಿರ್ವಹಿಸತಕ್ಕದ್ದು ಮತ್ತು ಶಾಖೆಯಲ್ಲಿ ಯಾವುದಾದರೂ ತುರ್ತು ಕೆಲಸವಿದ್ದರೆ ಮೇಲಾಧಿಕಾರಿಗಳು ಕೆಲಸ ನಿರ್ವಹಿಸಲು ಆದೇಶ ಮಾಡಿದಲ್ಲಿ ಅಂತಹ ಆದೇಶಗಳನ್ನು ತಪ್ಪದೇ ಪಾಲಿಸಿ ಸಮಯ ಮೀರಿದ ಕಾರಣ ನೀಡದೆ ಕೆಲಸ ನಿರ್ವಹಿಸತಕ್ಕದ್ದು ಎಂಬ ಷರತ್ತಿಗೆ ಒಳಪಟ್ಟು ಈ ಆದೇಶವನ್ನು ಹೂರಡಿಸಲಾಗಿದೆ.

ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಗಳು ತುರ್ತು ಕೆಲಸ ನಿರ್ವಹಿಸಲು ಸೂಚಿಸಿದ ಸಂದರ್ಭದಲ್ಲಿ (ವಿಶೇಷವಾಗಿ ಕೋವಿಡ್-19) ಕಛೇರಿ ಸಮಯ ಬದಲಾವಣೆ ಅನ್ವಯಿಸುವುದಿಲ್ಲ.

ಇದಲ್ಲದೇ ಸಂಸ್ಥೆಯ ಉಳಿದ ಕಛೇರಿಗಳ ಕೆಲಸದ ವೇಳೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

12/4

ಸಹಾಯಕ ಪ್ರಧಾನ ವ್ಯವಸ್ಥಾಪಕರು(ಸಿ&ಆ)

**ಎಲ್ಲಾ ಶಾಖಾ ಕಛೇರಿಗಳು /ಆಲೆಪ ಕೋಶಗಳಿಗೆ**

ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ } 
ಕಾರ್ಯ ನಿರ್ವಾಹಕ ನಿರ್ದೇಶಕರುಗಳು-I &II ಮಾಹಿತಿಗಾಗಿ
ವ್ಯವಸ್ಥಾಪಕ ನಿರ್ದೇಶಕ ರವರ ಕಛೇರಿಗೆ } ಮಾಹಿತಿಗಾಗಿ.
ಗ್ರಂಥಾಲಯ / ಸೂಚನಾ ಫಲಕಕ್ಕೆ

ಪ್ರಧಾನ ಕಛೇರಿ : ಕೆ.ಎಸ್.ಎಫ್.ಸಿ. ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು – 560 052.
ದೂರವಾಣಿ ಸಂಖ್ಯೆ – ಸಾಮಾನ್ಯ : 080-22263322 ಇ-ಮೇಲ್: info@ksfc.in ವೆಬ್: www.ksfc.karnataka.gov.in
**HEAD OFFICE :** K.S.F.C. Bhavana, # 1/1, Thimmaiah Road, Near Cantonment Railway Station, Bengaluru - 560 052.
**Telephone :** Gen : 22263322 **e-mail :** info@ksfc.in, **Website :** www.ksfc.karnataka.gov.in